ಮಧ್ಯಂತರ ಅರ್ಜಿ ನಂಬ್ರ 6 ರ ಆದೇಶದ ಮೇರೆಗೆ ದಿಃ 08-01-2018 ರಂದು ಸಾಕ್ಷಿದಾರ ರನ್ನು ಪುನಹಾ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಕೆ.ಪಿ.ಎಸ್ ವಕೀಲರಿಂದ

ನನಗೆ ಸಂಬಂಧಪಟ್ಟಂತಹಾ ಎಕ್ಸರೇ ಹಾಜರುಪಡಿಸುತ್ತಿದ್ದು ಆ ಬಗ್ಗೆ ಅದನ್ನು ಗುರುತಿಸಲು ಎದ್ರುದಾರರ ವಕೀಲರು ತಕರಾರು ಮಾಡಿರುತ್ತಾರೆ. ಆ ಬಗ್ಗೆ ಎಕ್ಸರೇಯಲ್ಲಿ ಮಂಜುನಾಥ ಎಂಬ ಹೆಸರಿದ್ದ ಕಾರಣ ಮತ್ತು ದಿನಾಂಕ 02-09-2015 ರಂದು ತೆಗೆದ ಕಾರಣ ಅದು ಸಾಕ್ಷಿದಾರರಿಗೆ ಸಂಬಂಧಪಟ್ಟ ಎಕ್ಸರೇ ಎಂದು ಇದ್ದ ಕಾರಣ ಆ ಬಗ್ಗೆ ಎದ್ರುದಾರರ ವಕೀಲರಿಗೆ ಪಾಟೀ ಸವಾಲು ಮಾಡಲು ಸಹ ಅವಕಾಶ ಇದ್ದ ಕಾರಣ ಆ ಬಗ್ಗೆ ಗುರುತಿಸಲು ಬರುವುದಿಲ್ಲ ಎಂಬ 2 ನೇ ಎದ್ರುದಾರರ ಪರ ವಕೀಲರ ತಕರಾರು ತಳ್ಳಿ ಹಾಕಲಾಯಿತು. ಮತ್ತು ಎಕ್ಸರೇಯನ್ನು ನಿಪಿ-10 ಎಂದು ಗುರುತಿಸಲಾಯಿತು. ಆ ಬಗ್ಗೆ ಆ ಎಕ್ಸರೇಯನ್ನು ಅಪಘಾತದಲ್ಲಿ ಆದಂತಹಾ ಕೈಗೆ ಮತ್ತು ಕಾಲಿಗೆ ಪೆಟ್ಟಾದ ಬಗ್ಗೆ ಚಿನ್ಮಯ್ ಆಸ್ಪತ್ರೆಯಲ್ಲಿ ತೆಗೆದ ಎಕ್ಸರೇ ಆಗಿರುತ್ತದೆ.

ಪಾಟೀ ಸವಾಲು: 2ನೇ ಎದ್ರುದಾರರ ಪರವಾಗಿ ಶ್ರೀ ಎನ್ ವಿ ಆರ್ ವಕೀಲರಿಂದ

27-12-2017 ರಂದು ಈ ನ್ಯಾಯಾಲಯದ ಮುಂದೆ ಪಾಟೀ ಸವಾಲು ಮಾಡಿದಾಗ ನಾನು ಸತ್ಯ ವಿಚಾರ ತಿಳಿಸಿರುತ್ತೇನೆ. ಆ ದಿನ ನಾನು ನ್ಯಾಯಾಲಯದ ಮುಂದೆ ಸಾಕ್ಷಿ ಕೊಟ್ಟಾಗ ನಾನು ಆಸ್ಪತ್ರೆಗೆ ಹೋಗಿಲ್ಲ ಆ ಬಗ್ಗೆ ನನ್ನಲ್ಲಿ ದಾಖಲಾತಿ ಇಲ್ಲಾ ಎಂದು ಹೇಳಿದ ವಿಚಾರ ಸುಳ್ಳು. ಎಕ್ಸರೆ ತೆಗೆದ ಬಗ್ಗೆ ಬಿಲ್ಲು ಇತ್ತು ಆದರೆ ಅದು ಕಳೆದು ಹೋಗಿದೆ. ಯಾವುದೇ ಆಸ್ಪತ್ರೆಗೆ ಪರೀಕ್ಷೆ ಮಾಡಲು ಹೋಗಬೇಕಾದರೆ ಒಂದು ಕಾರ್ಡು ಮಾಡಬೇಕಾಗುತ್ತದೆ ಎಂದರೆ ನಿಜ ಆದರೆ ಅದು ನನ್ನಲ್ಲಿ ಇಲ್ಲಾ ಯಾಕೆಂದರೆ ಅದು ಕಳೆದು ಹೋಗಿರುತ್ತದೆ. ನಿಪಿ-10 ನನಗೆ ಸಂಬಂಧಪಟ್ಟಂತಹಾ ಎಕ್ಸರೇ ಅಲ್ಲಾ ಅದು ಬೇರೆಯವರಿಗೆ ಸಂಬಂಧಪಟ್ಟ ಎಕ್ಸರೇ ಎಂದರೆ ಸರಿ ಅಲ್ಲ. 27-12-2017 ರಂದು ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿರುವ ವಿಚಾರ ಸತ್ಯ ಎಂದು ಸಾಬೀತುಪಡಿಸಲು ನಿಪಿ10 ನ್ನು ಆ ಬಗ್ಗೆ ಹಾಜರುಪಡಿಸಿದ್ದೇನೆಂದರೆ ಸರಿ ಅಲ್ಲಾ. ಆ ಎಕ್ಸರೇಯನ್ನು ಆಸ್ಪತ್ರೆಯವರಾದ ರವಿ ಎನ್ನುವವರು ಅಂದರೆ ನಮ್ಮ ಮನೆ ಹತ್ತಿರದವರು ತೆಗೆದಿರುತ್ತಾರೆ. ನಿಪಿ-10 ಬರೇ ಎದೆಯ

ಭಾಗಕ್ಕೆ ಸಂಬಂಧಪಟ್ಟ ಎಕ್ಸರೇ ಎಂದರೆ ಸರಿ ಅಲ್ಲಾ. ಆ ಬಗ್ಗೆ ಅರ್ಧ ಎದೆಯ ಭಾಗದ್ದು ಕಂಡು ಬರುತ್ತದೆ ಎಂದರೆ ನಿಜ. ಕಾಲಿಗೆ ಸಂಬಂಧಪಟ್ಟ ಎಕ್ಸರೇ ತೆಗೆದಿರುವುದಿಲ್ಲ. ನಿಪಿ-10 ನ್ನು ಬಿಟ್ಟರೆ ನನ್ನ ಎಡಕೈಗೆ ಪೆಟ್ಟಾದ ಬಗ್ಗೆ ಬೇರೆ ಯಾವುದೇ ದಾಖಲಾತಿ ಇರುವುದಿಲ್ಲ. 02-09-2015 ರಂದು ರಾತ್ರಿ 9 ಗಂಟೆ 26 ಸೆಕೆಂಡಿಗೆ ನಿಪಿ-10 ತೆಗೆಸಿಲ್ಲ ಎಂದರೆ ಸರಿ ಅಲ್ಲ. ನಾನು ನ್ಯಾಯಾಲಯದ ಮುಂದೆ ದಿ:27-12-2017 ರಂದು ಒಂದು ರೀತಿಯ ಸುಳ್ಳು ವಿಚಾರ ಹೇಳಿರುತ್ತೇನೆ ಮತ್ತು ಈ ದಿನ ಮತ್ತೊಂದು ರೀತಿಯ ಸುಳ್ಳು ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆಂದರೆ ಸರಿ ಅಲ್ಲಾ.

<u>ಮರು ವಿಚಾರಣೆ :</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.
ಕುಂದಾಪುರ